ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ಓಲ.

ತಾಲ್ಲೂಕು	೮೭–೮೮	೮೮–೮೯	೮೯–೯೦	ಒಟ್ಟು
ಬೆಳ್ತಂಗಡಿ	೨	೩	೩	೮
ಭಂಟ್ವಾಳ	೨	೫	೧	೮
ಕುಂದಾಪುರ	೨	೫	೪	೧೧
ಕಾರ್ಕಳ	೧	೪	೪	೯
ಮಂಗಳೂರು	೨	೪	೨	೮
ಪುತ್ತೂರು	೧	೩	೧	೫
ಸೂಳ್ಯ	೧	೧	–	೨
ಉಡುಪಿ	೧	೮	೮	೧೭
ಒಟ್ಟು	೧೨	೩೩	೨೩	೭೮

ಆ) ಇಲ್ಲ, ಸದ್ಯಕ್ಕೆ ಔಷಧ ಸರಬರಾಜನ್ನು ಮಾತ್ರ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಹೆಚ್ಚಿಸಿದ್ದು ಮಿಕ್ಕ ಸೌಲಭ್ಯಗಳನ್ನು ಹಣದ ಲಭ್ಯತೆಯನ್ನು ಅನುಸರಿಸಿ ಒದಗಿಸಲಾಗುವುದು.

ಇಡಗೂರ್ ಗ್ರಾಮದಲ್ಲಿ ಹಾಲಿನ ಕೇಂದ್ರ

೮೭೬(೧೦೫೨) ಶ್ರೀ ಜಿ ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಅರಣ್ಯ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಇಡಗೂರ್ ಗ್ರಾಮವು ಸುತ್ತಮುತ್ತಲ ೨೦ ಹಳ್ಳಿಗಳಿಗೆ ಕೇಂದ್ರವಾಗಿದ್ದು ಅಲ್ಲಿ ಒಂದು ಹಾಲಿನ ಕೇಂದ್ರ ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಸದರೀ ಗ್ರಾಮದಲ್ಲಿ ಹಾಲಿನ ಕೇಂದ್ರವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದೇ?

ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಬಿ. ಬಸವಲಿಂಗಪ್ಪ (ಪಶು ಸಂಗೋಪನೆ ಮತ್ತು ಅರಣ್ಯ ಸಚಿವರು).—

ಅ) ಬಂದಿದೆ.

ಆ) ಸಧ್ಯದಲ್ಲಿ ಇಲ್ಲ.

ಇ) ಉದ್ಭವಿಸುವುದಿಲ್ಲ.

ಕುಂದಾಪುರ ತಾಲ್ಲೂಕಿನ ಹರಿಜನ, ಗಿರಿಜನರ ಭೂಮಿಯನ್ನು ಅರಣ್ಯ ಇಲಾಖೆಯವರಂ ಆಕ್ರಮಿಸಿರುವ ಬಗ್ಗೆ

೮೭೮ (೧೫೦೭) ಶ್ರೀ ಪ್ರತಾಪ ಚಂದ್ರ ಶೆಟ್ಟಿ (ಕುಂದಾಪುರ).—ಮಾನ್ಯ ಅರಣ್ಯ ಹಾಗೂ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕುಂದಾಪುರ ತಾಲ್ಲೂಕಿನಲ್ಲಿ ಅರಣ್ಯ ಇಲಾಖೆಯವರಿಂದ ಹರಿಜನ, ಗಿರಿಜನರಿಗೆ ಮಂಜೂರಾಗಿ ಹಕ್ಕು ಪತ್ರ ಹೊಂದಿದ್ದ ಭೂಮಿಯನ್ನು ಬಲಾತ್ಕಾರವಾಗಿ ಆಕ್ರಮಿಸಿರುವ ಬಗ್ಗೆ ದೂರುಗಳಿದ್ದು, ಈ ರೀತಿಯ ಪ್ರಕರಣಗಳ ಸಂಖ್ಯೆ ಎಷ್ಟು? ವಿಸ್ತೀರ್ಣ ಸಹಿತ ವಿವರ?

ಆ) ಈ ಪ್ರಕರಣಗಳಿಂದ ಇರುವ ಭೂಮಿ ಕಳೆದುಕೊಂಡು ನಿರಾಶ್ರಿತರಾದ ಇವರಿಗೆ ಅರಣ್ಯ ಇಲಾಖೆ ಅಥವಾ ಸರ್ಕಾರ ಬದಲಿ ವ್ಯವಸ್ಥೆ ಮಾಡಿದೆಯೇ, (ಮಾಡಿದ್ದಲ್ಲಿ ಬದಲಿ ವ್ಯವಸ್ಥೆಯ ವಿವರ)

ಇ) ಬದಲಿ ವ್ಯವಸ್ಥೆ ಮಾಡದಿದ್ದಲ್ಲಿ ಸರ್ಕಾರ ಈ ಬಗ್ಗೆ ಯಾವ ವ್ಯವಸ್ಥೆ ಮಾಡಬಹುದು ಮತ್ತು ಈ ಸಂಬಂಧಿಸಿದ ಅಧಿಕಾರಿಗಳ ಮೇಲೆ ತೆಗೆದುಕೊಳ್ಳುವ ಸೂಕ್ತ ಕ್ರಮವೇನು ?

ಶ್ರೀ ಬಿ. ಬಸವಲಿಂಗಪ್ಪ (ಪಶುಸಂಗೋಪನೆ ಮತ್ತು ಅರಣ್ಯ ಸಚಿವರು).—

ಆ) ಇಲ್ಲ. ಕುಂದಾಪುರ ತಾಲ್ಲೂಕಿನ ಕೊರಗಿ ಗ್ರಾಮದಲ್ಲಿನ ಮೀಸಲು ಅರಣ್ಯದಲ್ಲಿನ ೭.೨೦ ಎಕರೆ ಪ್ರದೇಶವನ್ನು ಕಳಕಂಡವರಿಗೆ ಕಂದಾಯ ಇಲಾಖೆಯಿಂದ ದರಖಾಸ್ತು ಮೂಲಕ ಮಂಜೂರು ಮಾಡಿದ್ದು ಈ ಕ್ರಮವು ಅರಣ್ಯ ಸಂರಕ್ಷಣಾ ಕಾಯ್ದೆ, ೧೯೮೦ಕ್ಕೆ ವ್ಯತಿರಿಕ್ತವಾದುದರಿಂದ ಮಂಜೂರಾತಿ ಆದೇಶ ರದ್ದುಗೊಳಿಸಲಾಗಿದೆ.

೧) ಶ್ರೀಮತಿ ಗೌರಿ ಹರಿಜನ ಬಿನ್ ಬಾಲು ಹರಿಜನ ಸೂಚಿ ಕೊರ್ಗಿ ಗ್ರಾಮ, ಹೊಸಮಠ, ಕುಂದಾಪುರ ದಕ್ಷಿಣ ಕನ್ನಡ.

೨) ಶ್ರೀಮತಿ ಅಕ್ಕಿ ಹರಿಜನ ಬಿನ್ ಬಾಲು ಹರಿಜನ ಸೂಚಿ. ಕೊರ್ಗಿ, ಗ್ರಾಮ ಹೊಸಮಠ, ಕುಂದಾಪುರ, ದಕ್ಷಿಣ ಕನ್ನಡ.

೩) ಶ್ರೀಮತಿ ಮಂಜಿ ಹರಿಜನ ನಾಗ ಹರಿಜನ ಹೆಂಡತಿ ಸೂಚಿ, ಕೊರ್ಗಿ ಗ್ರಾಮ, ಹೊಸಮಠ, ಕುಂದಾಪುರ, ದಕ್ಷಿಣ ಕನ್ನಡ.

ಆ) ಈ ಮೂರು ಜನರಿಗೆ ಕೊರ್ಗಿ ಗ್ರಾಮದ ಪಕ್ಕದ ಗ್ರಾಮವಾದ ಅಸೋಡಿನಲ್ಲಿ ಬದಲಿ ದರಖಾಸ್ತಿಗೆ ಜಮೀನು ಮಂಜೂರು ಮಾಡುವ ಪ್ರಸ್ತಾವನೆಯು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ.

ಇ) ಉದ್ಭವಿಸುವುದಿಲ್ಲ.

ಹಾಸನ ಜಿಲ್ಲಾ ಸಾರ್ವಜನಿಕ ಆಸ್ಪತ್ರೆಯಲ್ಲಿರುವ ಸೌಲಭ್ಯಗಳು

೮೮೧ (೧೫೧೭) ಶ್ರೀ ಬಿ. ಶಿವಪ್ಪನವರು (ಗಂಡಸಿ).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಜಿಲ್ಲಾ ಕೇಂದ್ರಗಳ ಸಾರ್ವಜನಿಕ ಆಸ್ಪತ್ರೆಯಲ್ಲಿ ಪರಿಣಿತ ವೈದ್ಯರುಗಳು ಯಾವ ಸಂಖ್ಯೆಯಲ್ಲಿರಬೇಕು ?

ಆ) ೩೫೦ ಹಾಸಿಗೆಯುಳ್ಳ ಹಾಸನ ಸಾರ್ವಜನಿಕ ಆಸ್ಪತ್ರೆಯಲ್ಲಿ ಯಾವ ರೀತಿಯ ಪ್ರಮಾಣದಲ್ಲಿ ಪರಿಣಿತಿ ವೈದ್ಯರುಗಳಿದ್ದಾರೆ ?

ಇ) ಗ್ಲೂಕೋಸ್ ಬಾಟ್ಲಿ ಉತ್ಪತ್ತಿ ಮಾಡುವಂತಹ ಸೌಲಭ್ಯ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿವೆಯೇ? ಹಾಸನದಲ್ಲಿಲ್ಲದಿರಲು ಕಾರಣವೇನು ?

ಈ) ಹಾಸನ ಜಿಲ್ಲಾ ಆಸ್ಪತ್ರೆಯಲ್ಲಿ ಆಂಟುರೋಗಕ್ಕೆ ಸಂಬಂಧಿಸಿದಂತೆ ಸರಿಯಾದ ವಾರ್ಡ್ ಇಲ್ಲದೆ ಇತರೆ ರೂಪದ ರೋಗಿಗಳಿಗೆ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉ) ಪಾಂತಿ ಭೇದಿ ರೋಗಿಗಳ ವಾರ್ಡ್ ಇಲ್ಲದೆ, ಇತರೆ ರೋಗಿಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಗಮನಕ್ಕೆ ಬಂದಿದ್ದರೆ ಈ ವರ್ಷ ಪ್ರತ್ಯೇಕ ಕೊಠಡಿ ಕಟ್ಟಿಸಲು ಕ್ರಮ ತೆಗೆದುಕೊಂಡಿದ್ದೀರಾ ?